# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಾಸರಹಳ್ಳಿ ವಲಯ,**

**ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.**

ಸಂಖ್ಯೆ:ಕಾ.ಪಾ.ಅ(ಯೋಜನೆ)/ಟೆಂಡರ್/12/2018-19

ಕಾರ್ಯಪಾಲಕ ಅಭಿಯಂತರವರ ಕಛೇರಿ
ಯೋಜನಾ ವಿಭಾಗ,
ದಿನಾಂಕ:20-02-2019

**ಟೆಂಡರ್ ಆಹ್ವಾನ ಪ್ರಕಟಣೆ (ಎನ್ಐಟಿ)**
**ಅಲ್ಪಾವಧಿ ಟೆಂಡರ್ ಪ್ರಕಟಣೆ, ದ್ವಿಲಕೋಟೆ ಪದ್ಧತಿ, (3ನೇ ಕರೆ)**
**(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)**

ಕಾರ್ಯಪಾಲಕ ಅಭಿಯಂತರರು (ಯೋಜನೆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಆಯುಕ್ತರು ಬಿಬಿಎಂಪಿ, ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಕಾಯ್ದೆ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ಸಹಾಯ ಕೇಂದ್ರಗಳು, ಕಛೇರಿಗಳಿಗೆ ಅಗತ್ಯವಿರುವ ಹೊರಸಂಪನ್ಮೂಲ ಅಧಾರಿತ ಗಣಕಯಂತ್ರ ನಿರ್ವಾಹಕರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಹೊರಸಂಪನ್ಮೂಲ ಏಜೆನ್ಸಿಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿ ಮೂಲಕ ಅಲ್ಪಾವಧಿ ಸೇವಾ ಶುಲ್ಕ ಶೇಕಡವಾರು ದರ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ | ಇ.ಎಂ.ಡಿ ಮೊತ್ತ ರೂ ಗಳಲ್ಲಿ | ಒದಗಿಸಬೇಕಾದ ಸೇವೆಯ ಅವಧಿ |
|---|---|---|---|---|
| 1 | ಬಿಬಿಎಂಪಿ ದಾಸರಹಳ್ಳಿ ವಲಯಕ್ಕೆ ಒಳಪಡುವ ಕಛೇರಿಗಳಿಗೆ ಒಟ್ಟು 41 ಜನ ಡೇಟಾ ಎಂಟ್ರಿ ಅಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಬಗ್ಗೆ. (3ನೇ ಕರೆ) | 96.50 ಲಕ್ಷಗಳು | 1,93,000/- | 12 ತಿಂಗಳುಗಳು |

1. **ವೇಳಾ ಪಟ್ಟಿ :**
   a) ಟೆಂಡರ್ ದಾಖಲೆಗಳು ಈ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದೊರೆಯುವ ದಿನಾಂಕ:25-02-2019 ರಿಂದ.
   b) ಟೆಂಡರ್ ಅಕ್ಷೇಪಣೆಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ:-27-02-2019 ಸಂಜೆ:3:30 ಗಂಟೆವರೆಗೆ
   c) ಪೂರ್ವಭಾವಿ ಸಭೆಯ ದಿನಾಂಕ:01-03-2019 ಮಧ್ಯಾಹ್ನ:3:30 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ದಾಸರಹಳ್ಳಿ ವಲಯ) ಯಲ್ಲಿ
   d) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ:08-03-2019 ಸಂಜೆ:4:00 ಗಂಟೆವರೆಗೆ.
   e) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ:11-03-2019 ಸಂಜೆ 4.30 ಗಂಟೆಗೆ.
   f) ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ:14-03-2019 ಸಂಜೆ 4.30 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಯ ನಂತರ.

2. ಕರ್ತವ್ಯ ನಿರ್ವಹಿಸಬೇಕಾದ ಸ್ಥಳ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ವಿವಿಧ ಕಛೇರಿಗಳಲ್ಲಿ.
3. ಸದರಿ ಸೇವೆಗೆ ನಿಗದಿ ಪಡಿಸಲಾಗಿರುವ ಇ.ಎಂ.ಡಿ ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ನಿಯಾಮಾವಳಿಗಳಂತೆ ಸಲ್ಲಿಸುವುದು. ಸದರಿ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ. ಮಾನವ ಸಂಪನ್ಮೂಲ ಒದಗಿಸುವ ಸಂಬಂಧಿಸಿದಂತೆ, NSIC ಪ್ರಮಾಣ ಪತ್ರವನ್ನು ಹೊಂದಿರುವ ಬಿಡ್‌ದಾರರು/ಗುತ್ತಿಗೆದಾರರು ಸರ್ಕಾರದ ಅಧಿಸೂಚನೆ ನಂ.FD 130 Exp 12/15, ದಿನಾಂಕ:–08–09–2015 ರಂತೆ ಇ.ಎಂ.ಡಿ ಪಾವತಿಸುವುದರಿಂದ ವಿನಾಯ್ತಿ ನೀಡಲಾಗಿರುತ್ತದೆ. ಪ್ರಮಾಣ ಪತ್ರವನ್ನು ಲಗತ್ತಿಸುವುದು.
4. ಟೆಂಡರ್ ಅವಧಿಯು ಕಾರ್ಯದೇಶ ನೀಡಿದ ದಿನಾಂಕದಿಂದ 12 ತಿಂಗಳ ಕಾಲಾವಧಿವರೆಗೆ ಅಥವಾ ಮುಂದಿನ ಆದೇಶದವರೆವಿಗೂ ಇರುತ್ತದೆ. ಈ ಅವಧಿಯಲ್ಲಿ ನಿಗಧಿಪಡಿಸಿದ ದರಗಳಿಗೆ ಸೇವಾ ಶುಲ್ಕವನ್ನು ಮಾತ್ರ ನಮೂದಿಸತಕ್ಕದ್ದು. ಸೇವಾ ಶುಲ್ಕವು ಸೊನ್ನೆ ಎಂದು ನಮೂದಿಸಬಾರದು. ಸೊನ್ನೆ ನಮೂದಿಸಿದರೆ ಟೆಂಡರ್ ಅರ್ಜಿಯನ್ನು ತಿರಸ್ಕರಿಸಲಾಗುವುದು.
5. ಟೆಂಡರ್‌ದಾರರು ಆದಾಯ ತೆರಿಗೆಯ PAN, TAN, ವೃತ್ತಿ ತೆರಿಗೆ, GST ಇತ್ಯಾದಿ ನೊಂದಣಿ ಸಂಖ್ಯೆಗಳನ್ನು ತಪ್ಪದೇ ಅರ್ಜಿಯಲ್ಲಿ ನಮೂದಿಸಿ ಸಂಬಂಧಿಸಿದ ದಾಖಲೆಗಳ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸುವುದು.
6. ಯಾವುದೇ ಮಾಹಿತಿಯನ್ನು ನೀಡದೆ ಕೆ.ಟಿ.ಪಿ.ಪಿ. ಅಧಿನಿಯಮ 1999 ಪ್ಯಾರ 14 ಮತ್ತು 15 ರಂತೆ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.
7. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದು ಕೊಳ್ಳಬಹುದು.

ಸಹಿ/–
**ಕಾರ್ಯಪಾಲಕ ಅಭಿಯಂತರರು**
ಯೋಜನಾ ವಿಭಾಗ
ದಾಸರಹಳ್ಳಿ ವಲಯ,

<u>ಪ್ರತಿಯನ್ನು:</u>

1) ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
2) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ. ಬೆಂಗಳೂರು ರವರಿಗೆ ಮಾಹಿಗಾಗಿ ಕಳುಹಿಸಿದೆ.
3) ಪ್ರಧಾನ ಅಭಿಯಂತರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
4) ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ, ಬಿಬಿಎಂಪಿ. ಬೆಂಗಳೂರು ರವರಿಗೆ ಮಾಹಿಗಾಗಿ ಕಳುಹಿಸಿದೆ.
5) ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಸಲ್ಲಿಸುತ್ತಾ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
6) ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಬೆಂಗಳೂರು. ರವರಿಗೆ ಸಲ್ಲಿಸುತ್ತಾ ರಾಜ್ಯ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟಣೆ ಹೊರಡಿಸಲು ಕೋರಿದೆ.
7) ಸಾರ್ವಜನಿಕ ಸಂಪರ್ಕಾಧಿಕಾರಿ ಬಿಬಿಎಂಪಿ ರವರಿಗೆ ಸಲ್ಲಿಸುತ್ತಾ ಆಂಗ್ಲ ಮತ್ತು ಕನ್ನಡ ದಿನ ಪತ್ರಿಕೆ ಗಳಲ್ಲಿ ಪ್ರಕಟಿಸಲು ಕೋರಿದೆ.
8) ಕಛೇರಿ ಪ್ರತಿ.

**ಕಾರ್ಯಪಾಲಕ ಅಭಿಯಂತರರು**
ಯೋಜನಾ ವಿಭಾಗ
ದಾಸರಹಳ್ಳಿ ವಲಯ,
ಬಿಬಿಎಂಪಿ, ಬೆಂಗಳೂರು